**ಬೈಲ ಗುತ್ತಿನ ಅಂತಕ್ಕ ಶೆಡ್ತಿಯ ಕಾಯಂ ಕೆಲಸದ ಹೆಣ್ಣು ಅಕ್ಕು ನಿಧ ನಿಧಾನಕ್ಕೆ ಅಕ್ಕು ಅಕ್ಕ ಆಗಿ ಆಮೇಲೆ ಅಕ್ಕು ಪೂಜಾರ್ತಿ ಆದದ್ದು ದೊಡ್ಡದೊಂದು ಕತೆ. ಬೆದ್ರದ ಮನೆ ಸೇರಿದ ಮೇಲೆ ಅಕ್ಕುಗೆ ಎಲ್ಲವೂ ಸಿಕ್ಕಿತ್ತು... ಗಂಡನ ಪ್ರೀತಿ ಒಂದು ಬಿಟ್ಟು!**

ಅಕ್ಕು ಅಕ್ಕಾ... ಅದ್ಲ ಬ್ಯಾರಿಯ ಮನೆಗೆ ಹೋಗ್ಬೇಕು ಒಮ್ಮೆ. ನಮ್ಮ ಚುಕ್ಕುನ ಮಗನಿಗೆ ಹುಷಾರಿಲ್ಲದಾಗ ಕಲ್ಲುರ್ಟಿಗೆ ಒಂದು ಕೋಳಿ ಹೇಳಿದ್ದು ಕೊಡಲಿಕ್ಕೆ ಬಾಕಿಯಾಗಿದೆ. ಅದರೊಟ್ಟಿಗೆ ಪಾತೀಬಿಯ ಹತ್ರ ಒಮ್ಮೆ ಬಾಯಿಗೆ ಹಾಕ್ಲಿಕ್ಕೆ ಸಿಗ್ತದಾ ನೋಡುವಾ?" ಮಾಂಕು ಮೂಲ್ಯೇದಿ ಕುಳಿತಲ್ಲಿಂದ ಕುಂಡೆ ಮೇಲೆತ್ತಿದಳು. "ಇರೇ ಬಂದೆ ಈಗ" ಅಕ್ಕು ಪೂಜಾರ್ತಿ ಒಳಗೆ ಹೋದವಳು ಎರಡು ಮಿಠಾಯಿ ತೆಗೆದುಕೊಂಡು ಹೊರಬಂದಳು. ''ಇಕ್ಕಳ್ಳೆ ಮಾಂಕು... ಇದು ನಮ್ಮ ರಮೇಶ ಮೊನ್ನೆ ತ್ರಿಶೂರಿಂದ ತಂದದ್ದು. ಅಡಿಕೆಯಲ್ಲಿ ಮಾಡಿದ್ದಂತೆ. ಬೀಡದ ನೆನಪಾಗುವಾಗ ಬಾಯಿಗೆ ಹಾಕಿಕೊಳ್ತೇನೆ. ಒಳ್ಳೆ ಪರಿಮಳ ಉಂಟು ಮಾರಾಯ್ತಿ. ಬಾಯಿ ವಾಸನೆ ಸ ಹೋಗ್ತದೆ." ಮಾಂಕು ಮೂಲ್ಯೇದಿ ನಕ್ಕಳು. "ಮಿಠಾಯಿ ತಿನ್ನುವುದಾ?... ನನ್ನ ಒಳ್ಳೆ ಪ್ರಾಯದಲ್ಲೇ ತಿನ್ಲಿಲ್ಲ ನಾನು... ಅದೆಲ್ಲಾ ನಿಮಗೆ ಆಯಿತು. ಬಾಯಿ ವಾಸನೆ ಬಂದರೂ ಚಿಂತಿಲ್ಲ. ಒಂತುಂಡು ಸೊಪ್ಪು ಸೇರಿಸಿ ಎರಡು ಎಲೆ ತಿಂದರೆ ಮಾತ್ರ ನಂಗೆ ಕೊಸಿ." ಬೆನ್ನು ತಿರುಗಿಸಿದವಳ ಮುಖದಲ್ಲಿ ಏನೋ ಅತೃಪ್ತಿ ಇತ್ತೇ?... ಬಹುಶ ನಾನು ಒಳಗೆ ಹೋದದ್ದು ಬೇರೆ ಯಾಕೋ ಅಂದುಕೊಂಡಿದ್ದಾಳೆ... ಬ್ಯಾಗಿನಿಂದ ಮಿಠಾಯಿ ತೆಗಿವಾಗ ಒಮ್ಮೆ ತನಗೂ ಅನ್ನಿಸಿತ್ತು, ಒಂದು ಐವತ್ತು ರುಪಾಯಿ ಕೊಡುವಾಂತ... ತಿಂಗಳು ತಿಂಗಳು ಸಂಬಳ ಬಂದಾಗ ಒಂದಿಷ್ಟು ಹಣವನ್ನು ತನ್ನ ಕೈಯ್ಯಲ್ಲೂ ಕೊಡುತ್ತಾನೆ ರಮೇಶ. "ಈ ಪ್ರಾಯದಲ್ಲಿ ನನಗೇಕೆ ಹಣ" ಎಂದರೆ ಅವ ಕೇಳುವುದಿಲ್ಲ. "ನೋಡು ನಿಂಗೆ ಖರ್ಚು ಮಾಡಬೇಕೂಂತ ತೋರಿದರೆ ನಮ್ಮನ್ನು ಕೇಳಬೇಕು ಅಂತಾಗ್ಬಾರ್ದು. ಇಟ್ಟುಕೋ, ನಿಂಗೆ ಬೇಕಾದ ಹಾಗೆ ಮಾಡು. ನಿನ್ನ ಹಣ. ನಾನು ಲೆಕ್ಕ ಕೇಳಲಿಕ್ಕೆ ಬರುವುದಿಲ್ಲ." ಅದಕ್ಕೆ ಹೂಂಗುಡುವ ಮಾಲಿ ತಾನೇ ಆ ಹಣವನ್ನು ಅತ್ತೆಯ ವ್ಯಾನಿಟಿ ಬಾಗಿನಲ್ಲಿರಿಸಿ ಜೋಪಾನವಾಗಿ ಅತ್ತೆಯ ಬೀರುವಿನಲ್ಲಿಡುತ್ತಾಳೆ. ಅದು ಹಾಗೇ ಅಲ್ಲೇ ಇರುತ್ತದೆ. ಮಾಲಿ ಯಾವಾಗಲಾದರೂ ಅದನ್ನು ಅತ್ತೆಯ ಅಕೌಂಟಿಗೆ ಹಾಕುವ ವರೆಗೆ. ಇವತ್ತೂ ಬ್ಯಾಗಲ್ಲಿ ಒಂದಷ್ಟು ಐವತ್ತು, ನೂರರ ನೋಟುಗಳಿದ್ದವು. ಮತ್ಯಾಕೆ ತಾನು ಮಾಂಕುವಿಗೆ ಒಂದು ಐವತ್ತು ರುಪಾಯಿ ಕೊಡಲಿಲ್ಲ? ಬಹುಶಃ ಇಡೀ ಜೀವಮಾನದಲ್ಲಿ ಒಮ್ಮೆಯೂ ಕೊಟ್ಟು ಗೊತ್ತಿಲ್ಲದ್ದಕ್ಕಾ? ರಮೇಶ ಶಾಲೆಗೆ ಹೋಗುವಾಗ ತಾಯಿ, ಮಗ ಸೇರಿ ಅಂತಕ್ಕನಲ್ಲಿಂದ ತಂದ ಹಳೆ ಪಾಂಡ್ಸಿನ ಡಬ್ಬದಲ್ಲಿ ಕೋಯಿನ್ ಹಾಕಿ ಇಡುವುದಿತ್ತು. ತುಂಬಿದ ಮೇಲೆ ಅದನ್ನು ಗೋಪಾಲಣ್ಣನ ಅಂಗಡಿಯಲ್ಲಿ ಕೊಟ್ಟು ನೋಟು ಮಾಡಿಸುವುದು. ಹಾಗೆ ಒಮ್ಮೆ ನೋಟು ಮಾಡಿಸಿದಾಗ ಕೈಗೆ ಸಿಕ್ಕಿದ ನೂರರ ನೋಟು! ಅದನ್ನು ದೇವರ ಇದಿರು ಇಟ್ಟು ಅಮ್ಮ, ಮಗ ಪಟ್ಟ ಸಂಭ್ರಮ! ಆಮೇಲೂ ಎಷ್ಟೋ ಸಮಯ ಆ ನೋಟನ್ನು ಖರ್ಚು ಮಾಡದೇ ಪೆಟ್ಟಿಗೆಯಲ್ಲಿಟ್ಟ ನೆನಪು. ಅಕ್ಕು ಪೂಜಾರ್ತಿಯ ಕಣ್ಣುಗಳು ಗೇಟು ದಾಟುತ್ತಿದ್ದ ಮಾಂಕು ಮೂಲ್ಯೆದಿಯ ಬೆನ್ನ ಹಿಂದೆ ಸಾಗಿದವು. ಉಟ್ಟಿದ್ದ ಸೀರೆ ಜೂಲು ಜೂಲಾಗಿತ್ತು. ತನ್ನ ಸೀರೆ ಒಂದಿಷ್ಟು ಬಣ್ಣ ಮಾಸುವುದಕ್ಕಿಲ್ಲ... ''ಅತ್ತೇ... ಈ ಸೀರೆ ಇನ್ನು ಉಡ್ಬೇಡಿ" ಅನ್ನುತ್ತಾಳೆ